UASB
LIBRARY
Newspaper Clippings
Pg .1 Friday 17-12-2021 Jai Kisan



ಕೃಷಿ ಬೆಳೆ ಪದ್ಧತಿ ಬದಲು?

ತಜ್ಞರ ಜತೆಗೆ ಚರ್ಚಿಸಲು ಬೆಲೆ ಆಯೋಗ ಚಿಂತನೆ

• ಶಂಕರ ಪಾಗೋಜಿ

ಬೆಂಗಳೂರು: ವರ್ಷದಿಂದ ವರ್ಷಕ್ಕೆ ಮಳೆಗಾಲದ ಅವಧಿ ತಪ್ಪಿರುವಂತೆಯೇ, ಕೃಷಿ ಪದ್ಧತಿಯಲ್ಲಿ ಆಗಬೇಕಾದ ಸುಧಾರಣೆಗಳ ಕುರಿತಂತೆ ಅಧ್ಯಯನಕ್ಕೆ ರಾಜ್ಯ ಕೃಷಿ ಬೆಲೆ ಆಯೋಗ ಸಜ್ಜಾಗಿದೆ.

ಪ್ರಸಕ್ತ ವರ್ಷವಂತೂ ಮುಂಗಾರಿಗಿಂತ ಹಿಂಗಾರು ಮಳೆ ಪ್ರಮಾಣ ಹೆಚ್ಚಾಗಿದ್ದು, ಇದು ಇತ್ತೀಚಿನ ವರ್ಷಗಳಲ್ಲಿ ಕಂಡುಬರುತ್ತಿರುವ ಸನ್ನಿವೇಶವಾಗಿದೆ. ಹೀಗಾಗಿ, ಕೃಷಿ ಬೆಲೆ ಆಯೋಗ, ರೈತರ ಬೆಳೆ ಪದ್ಧತಿಯಲ್ಲಿ ಬದಲಾವಣೆ ತರಲು ಮುಂದಾಗಿದ್ದು, ಈ ಸಂಬಂಧ ಸರ್ಕಾರಕ್ಕೆ ವರದಿ ಸಲ್ಲಿಸಲು ಮುಂದಾಗಿದೆ. ಇದಕ್ಕಾಗಿ ಕೃಷಿ, ಮಣ್ಣು ತಳಿ, ಹವಾಮಾನ ಸೇರಿದಂತೆ ವಿವಿಧ ಕ್ಷೇತ್ರಗಳ ತಜ್ಞರ ಜೊತೆ ಸಭೆ ನಡೆಸಲು ಆಯೋಗ ಮುಂದಾಗಿದೆ. ಇತ್ತೀಚಿನ ವರ್ಷಗಳಲ್ಲಿ ಅಕ್ಟೋಬರ್, ನವೆಂಬರ್‌ನಲ್ಲಿ ಬಯಲು ಸೀಮೆ ಜಿಲ್ಲೆಗಳಲ್ಲಿಯೂ ಹೆಚ್ಚಿನ ಮಳೆಯಾಗುತ್ತಿದೆ. ಹೀಗಾಗಿ, ಕೃಷಿ ವ್ಯವಸ್ಥೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ.

ಅಕಾಲಿಕ ಮಳೆ ಹೆಚ್ಚಾಗುತ್ತಿರುವುದರಿಂದ ರೈತರು ತೊಂದರೆಗೆ ಒಳಗಾಗುತ್ತಿದ್ದಾರೆ. ಹೀಗಾಗಿ ಬೆಳೆ ಪದ್ಧತಿ ಬದಲಿಸುವ ಕುರಿತು ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು.

• ಹನುಮನಗೌಡ ಬೆಳಗುರ್ಕಿ,
ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ



ಸಂವಾದ ↳6

ತಜ್ಞರ ಅಭಿಪ್ರಾಯ: ಬೆಳೆ ಹಾಗೂ ಸಮಯ ಬದಲಾವಣೆ ಮಾಡಿದರೆ, 'ಯಾವ ಮಣ್ಣಿಗೆ ಯಾವ ಬೆಳೆ ಹೊಂದುತ್ತದೆ. ಕೆಲವು ಬೆಳೆಗಳು ಹವಾಮಾನದ ಆಧಾರದಲ್ಲಿ ಬೆಳೆಯುತ್ತವೆ. ಉಷ್ಣತೆ ಪ್ರಮಾಣ ಎಷ್ಟಿರುತ್ತದೆ ಎನ್ನುವುದೂ ಬೆಳೆಯ ಮೇಲೆ ಪರಿಣಾಮ ಬೀರುತ್ತದೆ. ಈ ಬಗ್ಗೆ ವರದಿ ಸಿದ್ಧಪಡಿಸಲು ಕನಿಷ್ಠ 15-20 ವರ್ಷಗಳಲ್ಲಿ ಆಗುತ್ತಿರುವ ಮಳೆಯ ಕಾಲಮಾನದಲ್ಲಿನ ಬದಲಾವಣೆ, ಹವಾಮಾನದ ಮೇಲಿನ ಪರಿಣಾಮ, ಹೆಚ್ಚಾಗುತ್ತಿರುವ ಉಷ್ಣತೆ ಪ್ರಮಾಣ ಎಲ್ಲವನ್ನೂ ಪರಿಗಣಿಸುವ ಅಗತ್ಯವಿದೆ ಎಂದು ಅಭಿಪ್ರಾಯಪಡಲಾಗಿದೆ.

17-12-2021
Uv Pg 01

ಎಲ್ಲ ಬೆಳೆಯನ್ನು ವಿಮೆ ವ್ಯಾಪ್ತಿಗೊಳಪಡಿಸಿ

ಕಾಫಿ ಸೇರಿ ಎಲ್ಲ ಬೆಳೆಗಳನ್ನು ಬೆಳೆ ವಿಮೆ ವ್ಯಾಪ್ತಿಗೆ ತಂದು ರೈತರ ಸಂಕಷ್ಟಕ್ಕೆ ನೆರವಾಗಬೇಕೆಂದು ಶಾಸಕ ಸಿ.ಟಿ.ರವಿ ಸರ್ಕಾರಕ್ಕೆ ಸಲಹೆ ನೀಡಿದರು.

ಅತಿವೃಷ್ಟಿಯಿಂದಾಗಿ ರಾಜ್ಯದಲ್ಲಿ ಸಾಕಷ್ಟು ಬೆಳೆ ನಾಶವಾಗಿದೆ. ಮಲೆನಾಡು ಭಾಗದಲ್ಲಿ ಕಾಫಿ, ಭತ್ತ, ಮೆಣಸು, ಏಲಕ್ಕಿ ಎಲ್ಲವೂ ನೆಲಕಚ್ಚಿದೆ. ಇದರಿಂದ ರೈತರಿಗೆ ಸಾಕಷ್ಟು ನಷ್ಟವಾಗಿದೆ. ಎಲ್ಲ ಬೆಳೆಗಳಿಗೂ ಬೆಳೆ ವಿಮೆ ಮಾಡಿಸುವುದರಿಂದ ಸರ್ಕಾರ ಪ್ರೋತ್ಸಾಹ ಧನ ನೀಡುವುದು ಕೂಡ ತಪ್ಪಲಿದೆ. ಟೊಮ್ಯಾಟೋ ಕೆಜಿಗೆ 104 ರೂ. ಇದ್ದರೆ, ರೈತರಿಗೆ ದೊರೆಯುತ್ತಿರುವ ಹಣ ಮಾತ್ರ 6 ರೂ! ಉಳಿದ ಹಣ ಎಲ್ಲಿಗೆ ಹೋಗುತ್ತಿದೆ? ಈ ರೀತಿ ಆದಲ್ಲಿ ರೈತರು ಏನು ಮಾಡಬೇಕು? ಇದಕ್ಕಾಗಿ ರಾಜ್ಯ ಸರ್ಕಾರ ಬೆಳೆ ನೀತಿ ತರಬೇಕೆಂದರು. ಈ ಪ್ರಸ್ತಾಪ ಸರ್ಕಾರ ಬಳಿ ಇದೆಯಾ ಎಂದು ಕೃಷಿ ಸಚಿವರನ್ನು ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ಕೃಷಿ ಸಚಿವ ಬಿ.ಸಿ.ಪಾಟೀಲ್, ಸದ್ಯ ಈ ಬಗ್ಗೆ ಆಲೋಚನೆ ಇಲ್ಲ ಎಂದರು.



17-12-2021
Vv Pg 07

For more information visit
University Library Website
Web - uasbagrilibindia.org
E-mail- librarian@uasbangalore.edu.in

ವಿದ್ಯಾರ್ಥಿಗಳಿಗೆ ಹೆಚ್ಚು ಅನುಕೂಲ: ದೇಶದಲ್ಲೇ ಮೊದಲ ವ್ಯವಸ್ಥೆ: ಶೀಘ್ರ ಆರಂಭ

ದತ್ತಾಂಶ ಹಂಚಿಕೊಳ್ಳುವ 'ಇ-ಸಹಮತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರದ ಅಧಿಕೃತ ದತ್ತಾಂಶವನ್ನು ತ್ವರಿತಗತಿಯಲ್ಲಿ ಹಂಚಿಕೊಳ್ಳಲು 'ಇ-ಸಹಮತಿ' ಸಾಫ್ಟ್‌ವೇರ್ ಅಭಿವೃದ್ಧಿಪಡಿಸಲಾಗಿದೆ. ಈ ವ್ಯವಸ್ಥೆ ದೇಶದಲ್ಲಿ ಪ್ರಥಮ ಬಾರಿಗೆ ರಾಜ್ಯದಲ್ಲಿ ಜಾರಿಗೊಳ್ಳುತ್ತಿದೆ.

'ನ್ಯಾಷನಲ್ ಇನ್ಫಾರ್ಮೆಟಿಕ್ಸ್ ಸೆಂಟರ್' (ಎನ್‌ಐಸಿ) ಅಭಿವೃದ್ಧಿಪಡಿಸಿರುವ ಈ ತಂತ್ರಾಂಶವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಅನುಷ್ಠಾನಗೊಳಿಸುತ್ತಿದೆ. ನಾಗರಿಕರ ಬಳಕೆಗೆ ಅವಕಾಶ ಕಲ್ಪಿಸುವ ಮೊಬೈಲ್ ಆ್ಯಪ್ ಸಹ ಶೀಘ್ರ ಲಭ್ಯವಾಗಲಿದೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಇ- ಆಡಳಿತ) ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಜೀವ್ ಚಾವ್ಲಾ ಪತ್ರಿಕಾಗೋಷ್ಠಿಯಲ್ಲಿ ಗುರುವಾರ ಈ ಕುರಿತ ವಿವರ ನೀಡಿದರು.

'ವಿದ್ಯಾರ್ಥಿಗಳಿಗೆ ಈ ಸಾಫ್ಟ್‌ವೇರ್ ನಿಂದ ಅತಿ ಹೆಚ್ಚು ಅನುಕೂಲ. ಈ ವ್ಯವಸ್ಥೆಯ ಮಾಹಿತಿಯ ಮೇಲೆ ನಾಗರಿಕರೇ ಸಂಪೂರ್ಣ ನಿಯಂತ್ರಣ ಹೊಂದಿರುತ್ತಾರೆ. ಇದರಲ್ಲಿ ಸರ್ಕಾರದ ಪಾತ್ರ ಇರುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

'ವಿವಿಧ ಕಂಪನಿಗಳು ನೇಮಕಾತಿಯ ಸಂದರ್ಭದಲ್ಲಿ ಅಭ್ಯರ್ಥಿಗಳ ಶೈಕ್ಷಣಿಕ ವಿವರಗಳ ದಾಖಲೆಗಳನ್ನು ಪರಿಶೀಲಿಸಲು ಬಯಸುತ್ತವೆ. ಅಂತಹ ಕಂಪನಿಗಳು, ವಿಶ್ವವಿದ್ಯಾಲಯಗಳು ಅಥವಾ ಪರೀಕ್ಷಾ ಮಂಡಳಿಗಳಿಂದ ಲಭ್ಯವಿರುವ ವಿವಿಧ ವಿಷಯಗಳ ಅಂಕಗಳ ಮಾಹಿತಿಯನ್ನು ಇ-ಸಹಮತಿ ಮೂಲಕ ಪಡೆಯಬಹುದು. ಇಲ್ಲಿ ಇ-ಸಹಮತಿ ಮಧ್ಯವರ್ತಿಯಾಗಿ ಕಾರ್ಯನಿರ್ವಹಿಸುತ್ತದೆ. ಆದರೆ, ಇದಕ್ಕೆ ವಿದ್ಯಾರ್ಥಿಗಳ ಒಪ್ಪಿಗೆ ಕಡ್ಡಾಯ' ಎಂದು ತಿಳಿಸಿದರು.

'ಅಧಿಕೃತ ಕಂಪನಿಗಳಿಗೆ ಮಾತ್ರ ಇ-ಸಹಮತಿಯಲ್ಲಿ ನೋಂದಣಿ ಮಾಡಿಕೊಳ್ಳಲು ಅವಕಾಶ ನೀಡಲಾಗಿದೆ. ಕಂಪನಿಗಳು ₹50 ಸಾವಿರ ಶುಲ್ಕ ಪಾವತಿಸಿ ನೋಂದಾಯಿಸಿಕೊಳ್ಳಬಹುದು. ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ನೇತೃತ್ವದ ಸಮಿತಿಯು ಅನುಮೋದನೆ ನೀಡಿದರೆ ಮಾತ್ರ ಕಂಪನಿಗಳ ನೋಂದಣಿಗೆ ಅವಕಾಶ ಇದೆ. ಇದರಿಂದ, ನಕಲಿ ಕಂಪನಿಗಳಿಗೆ ಮತ್ತು ದತ್ತಾಂಶ ದುರುಪಯೋಗಪಡಿಸಿಕೊಳ್ಳುವವರಿಗೆ ಅವಕಾಶ ಇರುವುದಿಲ್ಲ' ಎಂದು ವಿವರಿಸಿದರು.

'ರಾಜ್ಯದ 63 ವಿಶ್ವವಿದ್ಯಾಲಯಗಳು ಮತ್ತು ಶಿಕ್ಷಣ ಸಂಸ್ಥೆಗಳು ಈಗಾಗಲೇ ಇ-ಸಹಮತಿ ವೇದಿಕೆಯಲ್ಲಿ ನೋಂದಾಯಿಸಿಕೊಂಡಿವೆ. ಧಾರವಾಡದ ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ (ಐಐಐಟಿ) ಮತ್ತು ಬೆಂಗಳೂರಿನ ಭಾರತೀಯ ನಿರ್ವಹಣಾ ಸಂಸ್ಥೆ (ಐಐಎಂ) ನೋಂದಾಯಿಸಿಕೊಂಡಿಲ್ಲ. ಶೀಘ್ರದಲ್ಲಿ ಈ ಎರಡು ಸಂಸ್ಥೆಗಳು ಸಹ ನೋಂದಾಯಿಸಿಕೊಳ್ಳಲಿವೆ' ಎಂದು ತಿಳಿಸಿದರು.

'ಈ ವ್ಯವಸ್ಥೆಯಿಂದ ಕಾಗದ ರೂಪದ ಬದಲು ಡಿಜಿಟಲ್ ವ್ಯವಸ್ಥೆಯ ಮೂಲಕ ಮಾಹಿತಿ ಪಡೆದುಕೊಳ್ಳಬಹುದು. ಇದರಿಂದ ದಾಖಲೆಗಳನ್ನು ತಿರುಚಲು ಅವಕಾಶ ಇರುವುದಿಲ್ಲ. ಕಂಪನಿಗಳಿಗೂ ಪ್ರತಿಗಳನ್ನು ಸಲ್ಲಿಸುವ ಅಗತ್ಯವೇ ಬೀಳುವುದಿಲ್ಲ. ಹಂತ ಹಂತವಾಗಿ ಎಲ್ಲ ಇಲಾಖೆಗಳೂ ಈ ವೇದಿಕೆ ವ್ಯಾಪ್ತಿಯಲ್ಲಿ ಸೇರಿಕೊಳ್ಳಲಿವೆ. ಈ ಸಾಫ್ಟ್‌ವೇರ್ ಅಳವಡಿಸಿಕೊಳ್ಳಲು ತೆಲಂಗಾಣ ಸರ್ಕಾರವೂ ಆಸಕ್ತಿ ತೋರಿದ್ದು, ನಮ್ಮನ್ನು ಸಂಪರ್ಕಿಸಿದೆ' ಎಂದು ತಿಳಿಸಿದರು.

ಕಾರ್ಯನಿರ್ವಹಣೆ ಹೇಗೆ?

ವಿದ್ಯಾರ್ಥಿಯ ಒಪ್ಪಿಗೆ ಅನ್ವಯ, 'ಆಧಾರ್' ಸಂಖ್ಯೆಯ ದೃಢೀಕರಣ ಮೂಲಕ ದತ್ತಾಂಶ ಪಡೆಯಬಹುದು.

ವಿದ್ಯಾರ್ಥಿಯು ಲಾಗಿನ್ ಆದ ಬಳಿಕ 'ಆಧಾರ್' ಸಂಖ್ಯೆ ನಮೂದಿಸಬೇಕು. ಬಳಿಕ, 'ಒಟಿಪಿ' ಸಂದೇಶ ರವಾನೆಯಾಗುತ್ತದೆ. ವಿದ್ಯಾರ್ಥಿಯು 'ಒಟಿಪಿ' ದಾಖಲಿಸಿದಾಗ ಮಾತ್ರ ನೋಂದಾಯಿಸಿಕೊಂಡಿರುವ ಕಂಪನಿಯು ಆಯಾ ಪರೀಕ್ಷಾ ಮಂಡಳಿ ಅಥವಾ ಶಿಕ್ಷಣ ಸಂಸ್ಥೆಗಳಿಂದ ದತ್ತಾಂಶ ಪಡೆಯಬಹುದು. ಕಂಪನಿಗಳು ಗರಿಷ್ಠ ಎರಡು ವರ್ಷಗಳವರೆಗೆ ಮಾತ್ರ ಈ ದತ್ತಾಂಶವನ್ನು ನೋಡಬಹುದು.

'ಸದ್ಯ ಎಸ್ಸೆಸ್ಸೆಲ್ಸಿ ಪರೀಕ್ಷೆಗಳಿಗೆ ಸಂಬಂಧಿಸಿದ 2003ರ ನಂತರದ ಮಾಹಿತಿ ಮತ್ತು ಪಿಯು ಪರೀಕ್ಷೆಗಳ 2008ರ ನಂತರದ ವಿವರಗಳನ್ನು ಸಂಗ್ರಹಿಸಲಾಗಿದೆ. ಇತರ ಶಿಕ್ಷಣ ಸಂಸ್ಥೆಗಳ ಹತ್ತು ವರ್ಷಗಳ ಮಾಹಿತಿಯೂ ನಮ್ಮ ಬಳಿ ಇದೆ' ಎಂದು ರಾಜೀವ್ ಚಾವ್ಲಾ ತಿಳಿಸಿದರು.

'ಇ- ಸಹಮತಿ' ವಿಶೇಷಗಳು

- ವಿದ್ಯಾರ್ಥಿಗಳಿಗೆ ಉಚಿತ
- ನಕಲಿ ದಾಖಲೆಗಳನ್ನು ತಡೆಯಬಹುದು.
- ಕಂಪನಿಗಳಿಗೆ ಪ್ರತ್ಯೇಕ ನಿಯಮಾವಳಿ
- ಕಂಪನಿಗಳು ಕಾರ್ಯಾರಂಭ ಮಾಡಿ ಐದು ವರ್ಷಗಳಾಗಿರಬೇಕು.
- ಸದ್ಯಕ್ಕೆ ದೇಶದ ವ್ಯಾಪ್ತಿಯಲ್ಲಿ ಮಾತ್ರ ಬಳಕೆಗೆ ಅವಕಾಶ
- ಭವಿಷ್ಯದಲ್ಲಿ ವಿದೇಶಿ ವಿಶ್ವವಿದ್ಯಾಲಯಗಳು ಸೇರ್ಪಡೆ
- ನಿರ್ದಿಷ್ಟ ಮಾಹಿತಿಯನ್ನು ಮಾತ್ರ ಹಂಚಿಕೊಳ್ಳಲು ವಿದ್ಯಾರ್ಥಿಗಳಿಗೆ ಅವಕಾಶ
- ಕಂಪನಿಗಳ ಪರಿಶೀಲನೆಗೆ ಮತ್ತು ಮಾರ್ಗಸೂಚಿ ರೂಪಿಸಲು ಎಸಿಎಸ್ ನೇತೃತ್ವದ ಸಮಿತಿ

17-12-2021 Pv Pg 01

17-12-2021 Uv Pg 01

ಉತ್ತರ ಕರ್ನಾಟಕ ಭಾಗದಲ್ಲಿ ಪ್ರಮಾಣ ಹೆಚ್ಚು

ಕೋಲಾರ, ಚಿಕ್ಕಬಳ್ಳಾಪುರ ಸೇರಿ ಬರ ಪ್ರದೇಶಗಳಲ್ಲೂ ಜಿಗಿತ

ಬರದ ನಾಡಲ್ಲಿ ಬೋರ್‌ವೆಲ್‌ಗಳ ಭೋರ್ಗರೆತ!

• ವಿಜಯಕುಮಾರ ಚಂದರಗಿ

ಬೆಂಗಳೂರು: ಇತ್ತೀಚಿನ ವರ್ಷಗಳಲ್ಲಿ ಮಳೆ ತನ್ನ ದಿಕ್ಕು ಬದಲಿಸಿದೆ. ಬೆಂಗಳೂರು ಸೇರಿದಂತೆ ಬಯಲು ಸೀಮೆಗಳಲ್ಲಿಹೆಚ್ಚು ಮಳೆ ಸುರಿಯುತ್ತಿದ್ದು ಈ ಭಾಗಗಳಲ್ಲಿ ಅಂತರ್ಜಲ ಮಟ್ಟ ಕೂಡ ಏರಿಕೆಯಾಗುತ್ತಿದೆ. ಇದು ರೈತರ ಮೊಗದಲ್ಲಿಹೊಸ ಭರವಸೆ ಮೂಡಿಸಿದೆ.

ರಾಜ್ಯದ 227 ತಾಲೂಕುಗಳಲ್ಲಿ ರಾಜ್ಯ ಅಂತರ್ಜಲ ನಿರ್ದೇಶನಾಲಯ ನಿರ್ಮಿಸಿರುವ ಕೊಳವೆಬಾವಿಗಳ ಮೂಲಕ ಅಂತರ್ಜಲ ಮಟ್ಟವನ್ನು ಮಾಪನ ಮಾಡಲಾಗಿದೆ. ಈ ವೇಳೆ ಸುಮಾರು 144 ತಾಲೂಕುಗಳಲ್ಲಿಕನಿಷ್ಠ 0.5ರಿಂದ ಗರಿಷ್ಠ ಸುಮಾರು 27 ಮೀಟರ್‌ಗಳಷ್ಟು ಅಂತರ್ಜಲ ಮೇಲೆ ಬಂದಿದೆ. ಇದರಲ್ಲಿ ಉತ್ತರ ಕರ್ನಾಟಕದ ಭಾಗಗಳು ಹೆಚ್ಚಿವೆ. ಮಂಡ್ಯ, ಮೈಸೂರು, ರಾಮನಗರ, ಚಾಮರಾಜನಗರ, ಕರಾವಳಿಯ ಉತ್ತರ ಕನ್ನಡ, ಮಲೆನಾಡಿನ ಶಿವಮೊಗ್ಗ, ಹಾಸನ, ಕೊಡಗಿನಲ್ಲಿ ಅಂತರ್ಜಲಮಟ್ಟ ಇಳಿಮುಖವಾಗಿರುವುದು ಆಚ್ಚರಿ ಮೂಡಿಸಿದೆ.

ಕೋಲಾರ, ಚಿಕ್ಕಬಳ್ಳಾಪುರ ಸೇರಿದಂತೆ ಬರದ ನಾಡಿನಲ್ಲಿ ಪ್ರಸಕ್ತ ವರ್ಷವೂ ಸೇರಿದಂತೆ ಈಚೆಗೆ ಆ ಭಾಗಗಳಲ್ಲಿಹೆಚ್ಚು ಮಳೆಯಾಗುತ್ತಿದೆ. ಇದರೊಂದಿಗೆ ಸರ್ಕಾರದ ವಿವಿಧ



ಜೂನ್‌ನಿಂದ ನಿರಂತರವಾಗಿ ಮಳೆಯಾಗಿದೆ. ಲಾಕ್‌ಡೌನ್‌ನಿಂದ ಬಳಕೆ ಪ್ರಮಾಣ ಕಡಿಮೆಯಾಗಿ, ಅಂತರ್ಜಲದ ಮೇಲಿನ ಒತ್ತಡ ತಗ್ಗಿ, ಅಂತರ್ಜಲಮಟ್ಟ ಏರಿಕೆಯಾಗಿದೆ.

• ವಿ.ಎಸ್. ಪ್ರಕಾಶ್, ಅಂತರ್ಜಲ ತಜ್ಞ

ಯೋಜನೆಗಳಡಿ ಕೆರೆ ತುಂಬಿಸುವುದು, ಕೃಷಿ ಹೊಂಡಗಳು ಅಂತರ್ಜಲ ಹೆಚ್ಚಳಕ್ಕೆ ನೆರವಾಗುತ್ತಿವೆ. ಈ ಎಲ್ಲ ಅಂಶಗಳಿಂದ ಪಾತಾಳಕ್ಕೆ ಕುಸಿದಿದ್ದ ಅಂತರ್ಜಲಮಟ್ಟವು ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ. ಮಾಸಾಂತ್ಯಕ್ಕೆ ಇದರಲ್ಲಿ ಇನ್ನಷ್ಟು ಏರಿಕೆಯಾಗಲಿದೆ. ಈ ಬೆಳವಣಿಗೆಯು ಭವಿಷ್ಯದಲ್ಲಿ ಆ ಭಾಗದ ಕೃಷಿ ಚಟುವಟಿಕೆಗಳಿಗೆ ಪೂರಕವಾಗಲಿದೆ.

3-4 ವರ್ಷ ಕೃಷಿಗೆ ಪೂರಕ: ಸಾಮಾನ್ಯವಾಗಿ ಈ ಅವಧಿಯಲ್ಲಿ ಬಯಲುಸೀಮೆಗಳಲ್ಲಿ 15 ಮೀಟರ್ ಅಂತರ್ಜಲಮಟ್ಟ ಏರಿಕೆ ಆಗುತ್ತದೆ. ಆದರೆ, 25-30 ಮೀಟರ್‌ವರೆಗೂ ಹೆಚ್ಚಳ ಆಗಿರುವುದು ಮಳೆಯ ತೀವ್ರತೆಯನ್ನು ಸೂಚಿಸುತ್ತದೆ. ಅಲ್ಲದೆ, ಮಣ್ಣಿನಲ್ಲಿ ಫಲವತ್ತತೆ ಹಾಗೂ ನೀರನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಕಡಿಮೆಯಾಗಿಲ್ಲಎಂಬುದರ ಸೂಚನೆಯೂ ಇದಾಗಿದೆ. ಇದರಿಂದ ಮುಂದಿನ ಮೂರ್ನಾಲ್ಕು ವರ್ಷಗಳು ವಾಡಿಕೆ ಮಳೆ ಮತ್ತು ಈ ಅಂತರ್ಜಲದಿಂದ ಪರಿಣಾಮಕಾರಿಯಾಗಿ ಕೃಷಿ ಚಟುವಟಿಕೆಗಳು ನಡೆಯಲು ಪೂರಕವಾಗಲಿದೆ ಎಂದು ಕೃಷಿ ಹವಾಮಾನ ತಜ್ಞಡಾ.ಎಂ.ಬಿ. ರಾಜೇಗೌಡ ತಿಳಿಸಿದರು.

'ಅಂತರ್ಜಲಮಟ್ಟ ಈಗ ಹೆಚ್ಚಳವಾದಂತೆ ಕಂಡು ಬಂದರೂ, ಬೇಸಿಗೆಯಲ್ಲಿ ಇದು ಮತ್ತೆ ಪಾತಾಳಕ್ಕೆ ಕುಸಿಯುವ ಸಾಧ್ಯತೆ ಇದೆ. ಯಾಕೆಂದರೆ, ಮಣ್ಣಿನ ಮೇಲ್ಪದರದಲ್ಲಿ ವೇಗವಾಗಿ ಮಳೆನೀರು ಇಳಿಯುತ್ತದೆ. ನಂತರದ ಪದರಗಳಲ್ಲಿ ಅದರ ಪ್ರಕ್ರಿಯೆ ಅತ್ಯಂತ ನಿಧಾನವಾಗಿರುತ್ತದೆ.

▶ 8ನೇ ಪುಟಕ್ಕೆ

227 ರಾಜ್ಯದಲ್ಲಿನ ತಾಲೂಕುಗಳು

144 ತಾಲೂಕುಗಳಲ್ಲಿ ಅಂತರ್ಜಲ ಏರಿಕೆ

0.5 ಮೀಟರ್ ಕನಿಷ್ಠ ಏರಿಕೆ

27 ಮೀಟರ್ ಗರಿಷ್ಠ ಏರಿಕೆ

ಎಲ್ಲಿ ಏರಿಕೆ?

ಬಯಲುಸೀಮೆ ಮತ್ತು ಉ.ಕರ್ನಾಟಕದ ಜಿಲ್ಲೆಗಳು

ಎಲ್ಲಿ ಇಳಿಕೆ?

ಮಲೆನಾಡು, ಕರಾವಳಿ, ಹಳೇ ಮೈಸೂರು ಭಾಗದ ಜಿಲ್ಲೆಗಳು

ತಾಂತ್ರಿಕ ಸಮಸ್ಯೆ ಬಗೆಹರಿಸುವಲ್ಲಿ ರಾಜ್ಯ ಸರಕಾರ ವಿಫಲ | 7 ವರ್ಷದಿಂದ ರೈತರಿಗೆ ನಷ್ಟ

ರಾಜ್ಯದ ಮೆಕ್ಕೆಜೋಳಕ್ಕೆ ಬೆಂಬಲ ಬೆಲೆ ಇಲ್ಲ

■ ಯಳನಾಡು ಮಂಜು ದಾವಣಗೆರೆ
manjunath.lokanath@timesgroup.com

ಮೆಕ್ಕೆಜೋಳ ಬೆಂಬಲ ಬೆಲೆಯಿಂದ ಕರ್ನಾಟಕ ವಂಚಿತವಾಗಿದೆ. ಸತತ ಏಳು ವರ್ಷಗಳಿಂದ ಬೆನ್ನತ್ತಿರುವ ಒಂದು ಸಣ್ಣ ತಾಂತ್ರಿಕ ಸಮಸ್ಯೆ ಬಗೆಹರಿಸಿ ಬೆಂಬಲ ಬೆಲೆ ಕೊಡಿಸುವಲ್ಲಿ ರಾಜ್ಯ ಸರಕಾರ ವಿಫಲವಾಗಿದೆ. ಸರಕಾರದ ಜಡ ಧೋರಣೆ ಕಂಡು ರೈತರು ಆಕ್ರೋಶಗೊಂಡಿದ್ದಾರೆ. ಕೇಂದ್ರ ಸರಕಾರ ಎಲ್ಲ ಬೆಳೆಗಳಿಗೆ ನೀಡುವಂತೆ ಮೆಕ್ಕೆಜೋಳಕ್ಕೂ ಉತ್ತಮ ಬೆಂಬಲ ಬೆಲೆ ನೀಡಿದೆ. ಆದರೆ, ಈ ಬೆಲೆ ಮಾತ್ರ ಕರ್ನಾಟಕ ರೈತರಿಗೆ ಸಿಗದಂತಾಗಿದೆ.



ಏನಿದು ತಾಂತ್ರಿಕ ಸಮಸ್ಯೆ ?

2014ಕ್ಕೂ ಮುನ್ನ ರಾಜ್ಯದ ಮೆಕ್ಕೆಜೋಳ ಬೆಳೆಗಾರರು ಕೂಡ ಬೆಂಬಲ ಬೆಲೆ ಪಡೆದು ಕೊಳ್ಳುತ್ತಿದ್ದರು. 2013-14 ರಲ್ಲಂತೂ ವಾಡಿಕೆಗಿಂತ ಶೇ.20 ರಷ್ಟು ಹೆಚ್ಚು ಮೆಕ್ಕೆಜೋಳ ಬೆಳೆದಿದ್ದರೂ ಎಲ್ಲವನ್ನೂ ಬೆಂಬಲ ಬೆಲೆಯಲ್ಲಿ ಖರೀದಿ ಮಾಡಲಾಗಿತ್ತು. ಸರಕಾರ ಖರೀದಿ ಮಾಡಿದ ಮೆಕ್ಕೆಜೋಳ ಶೇಖರಣೆಗೆ ಗೋದಾಮುಗಳಲ್ಲಿ ಜಾಗ ಇಲ್ಲದೆ ರೈತರ ಹೊಲಗಳಲ್ಲಿ ಬಯಲಲ್ಲಿಯೇ ಕ್ಯಾಪ್ ಸ್ಟೋರೇಜ್ ಮಾಡಲಾಗಿತ್ತು. ಇಂತಹ ಉತ್ಪನ್ನವನ್ನು ಪಡಿತರ ವಿತರಣೆ ವ್ಯವಸ್ಥೆಯಲ್ಲಿ ವಿತರಣೆ ಮಾಡಬೇಕು ಎಂಬ ಅಂಶವನ್ನು ಬೆಂಬಲ ಬೆಲೆ ನಿಯಮದಲ್ಲಿ ಸೇರಿಸಿತು. ದೇಶದ ಉತ್ತರ ಹಾಗೂ ಪಶ್ಚಿಮ ರಾಜ್ಯಗಳಲ್ಲಿ ಪಡಿತರದಲ್ಲಿ ಮೆಕ್ಕೆಜೋಳ ವಿತರಿಸಲಾಗುತ್ತದೆ. ಅಸ್ಸಾಂ ಸೇರಿ ಸಪ್ತರಾಜ್ಯಗಳ ಜನ ಮೆಕ್ಕೆಜೋಳವನ್ನು ಬಳಕೆ ಮಾಡುತ್ತಾರೆ. ಹಾಗಾಗಿ ಆ ರಾಜ್ಯಗಳಲ್ಲಿ ನಿಯಮಕ್ಕೆ ಸೇರಿಸಿದ ಹೊಸ ಅಂಶದಿಂದ ಯಾವುದೇ ತೊಂದರೆ ಆಗಲಿಲ್ಲ. ಕರ್ನಾಟಕದಲ್ಲಿ ಮಾತ್ರ ಜನ ಮೆಕ್ಕೆಜೋಳವನ್ನು ಊಟದ ಪದಾರ್ಥವಾಗಿ ಬಳಸುವ ವಾಡಿಕೆ ಇಲ್ಲ, ಹಾಗಾಗಿ ಇಲ್ಲಿ ಪಡಿತರ ವ್ಯವಸ್ಥೆಯಲ್ಲಿ ಮೆಕ್ಕೆಜೋಳ ವಿತರಣೆಯೂ ಇಲ್ಲ. ಈ ಒಂದು ತಾಂತ್ರಿಕ ಕಾರಣ ಸರಿಪಡಿಸಿ ಪರಿಹಾರ ಕಂಡುಕೊಳ್ಳದ ಕಾರಣ ರಾಜ್ಯದ ರೈತರು ಮೆಕ್ಕೆಜೋಳ ಬೆಂಬಲ ಬೆಲೆಯಿಂದ ವಂಚಿತರಾಗಿದ್ದಾರೆ.

ರಾಜ್ಯದ ಪಾಲು ಶೇ.16.5

ದೇಶದಲ್ಲಿ ಬೆಳೆಯುವ ಮಕ್ಕೆಜೋಳದಲ್ಲಿ ರಾಜ್ಯದ ಪಾಲು ಶೇ.16.5 ರಷ್ಟಿದೆ. ರಾಜ್ಯದ ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ, ಹಾವೇರಿ, ವಿಜಯಪುರ, ಬಳ್ಳಾರಿ ಸೇರಿ ಮಧ್ಯ ಕರ್ನಾಟಕ ಮತ್ತು ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಮೆಕ್ಕೆಜೋಳ ಬೆಳೆಯಲಾಗುತ್ತದೆ. ಈ ವರ್ಷ ರಾಜ್ಯದಲ್ಲಿ ಬಿತ್ತನೆ-14.16 ಲಕ್ಷ ಹೆಕ್ಟೇರ್ ಮೆಕ್ಕೆಜೋಳ ಬಿತ್ತನೆ ಆಗಿದ್ದು ಸುಮಾರು 42.48 ಕೋಟಿ ಟನ್ ಉತ್ಪನ್ನ ನಿರೀಕ್ಷಿಸಲಾಗಿದೆ.

ನಷ್ಟದಲ್ಲಿ ರೈತರು

ಈ ವರ್ಷ ಕೇಂದ್ರ ಸರಕಾರ ಮೆಕ್ಕೆಜೋಳಕ್ಕೆ 1870 ರೂ. ಬೆಂಬಲ ಬೆಲೆ ನೀಡಿದ್ದು, ಕರ್ನಾಟಕ ಹೊರತು ಪಡಿಸಿ ಇತರೆ ರಾಜ್ಯಗಳ ರೈತರು ಈ ಲಾಭ ಪಡೆಯುತ್ತಿದ್ದಾರೆ. ಕರ್ನಾಟಕ ಮಾರುಕಟ್ಟೆಯಲ್ಲಿ ಈಗ ಮೆಕ್ಕೆಜೋಳಕ್ಕೆ 1510 ಕನಿಷ್ಠ 1630 ಮಾದರಿ ಬೆಲೆಯಿದೆ. ಈಗಾಗಲೇ ಮಾರುಕಟ್ಟೆಗೆ ಮೆಕ್ಕೆಜೋಳ ಆವಕ ದಾಂಗುಡಿಯಿಡುತ್ತಿದ್ದು, ರೈತರು ಈ ಬೆಲೆಗೆ ಮಾರಾಟ ಮಾಡುತ್ತಿದ್ದಾರೆ. ಬೆಂಬಲ ಬೆಲೆಗೆ ಹೋಲಿಸಿದರೆ ಪ್ರತಿ ಕ್ವಿಂಟಾಲ್‌ಗೆ 360 ರೂ. ನಷ್ಟಕ್ಕೆ ಒಳಗಾಗುತ್ತಿದ್ದಾರೆ.

ಈ ವರ್ಷ ಬೆಲೆಯಾದರೂ 1500 ರ ಹತ್ತಿರದಲ್ಲಿದೆ. ಹಿಂದಿನ ವರ್ಷ 1200 ರಿಂದ 1300 ದಾಟಲೇ ಇಲ್ಲ, ಆದರೆ 1850 ರೂ. ಬೆಂಬಲ ಬೆಲೆಯನ್ನು ಕಳೆದ ವರ್ಷ ಸರಕಾರ ಘೋಷಿಸಿತ್ತು. ಆ ವರ್ಷ ರೈತರು ಪ್ರತಿ ಕ್ವಿಂಟಾಲ್‌ಗೆ 550 ರೂ. ನಷ್ಟ ಆಗಿದೆ. ಸರಕಾರ ನಮಗೂ ಬೆಂಬಲ ಬೆಲೆ ಸಿಗುವಂತೆ ಮಾಡಿದ್ದಾರೆ ಎಷ್ಟೊಂದು ಲಾಭ ಆಗುತ್ತಿತ್ತು ಎಂದು ಹೇಳುವ ರೈತರು ಸರಕಾರ ವಿರುದ್ಧ ಆಕ್ರೋಶ ಹೊರ ಹಾಕುತ್ತಾರೆ.

> ಬೆಂಬಲ ಯೋಜನೆ ಎಂದ ಮೇಲೆ ಅಲ್ಲಿ ಸಾರ್ವಜನಿಕ ಪಡಿತರ ವಿತರಣೆ ವ್ಯವಸ್ಥೆ ಎಂಬ ತಾಂತ್ರಿಕ ಕಾರಣವನ್ನು ಮುಂದಿಡಬಾರದು. ಗುಣಮಟ್ಟದ ಉತ್ಪನ್ನಕ್ಕೆ ರಾಜಿ ಆಗುವುದು ಬೇಡ, ಆದರೆ ಇಂತಹ ತಾಂತ್ರಿಕ ನೆಪವೊಡ್ಡಿ ಖರೀದಿ ಮಾಡದೆ ಇರುವುದು ತಪ್ಪು, ರಾಜ್ಯ ಸರಕಾರಕ್ಕೆ ಕೇಂದ್ರ ಸರಕಾರ ಮನವೊಲಿಸುವ ಶಕ್ತಿಯೇ ಇಲ್ಲ.
> – ತೇಜಸ್ವಿ ಪಟೇಲ್ ರೈತ ಮುಖಂಡ

17-12-2021
Vk Pg 02

ಜಾನುವಾರು ಹತ್ಯೆ ನಿಷೇಧ: ಕಲಂ 5ರ ಜಾರಿಗೆ ಅನುಮತಿ ಕೋರಿದ ಸರ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಕಾಯ್ದೆ-2020ರ ಕಲಂ 5 ಅನ್ನು ಜಾರಿಗೊಳಿಸಲು ಅನುಮತಿ ನೀಡುವಂತೆ ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಮನವಿ ಮಾಡಿದೆ.

ಗೋಹತ್ಯೆ ನಿಷೇಧ ಕಾಯ್ದೆ ಪ್ರಶ್ನಿಸಿ ಸಾಮಾಜಿಕ ಕಾರ್ಯಕರ್ತ ಮೊಹಮದ್ ಆರೀಫ್ ಜಮೀಲ್ ಮತ್ತು ಕರ್ನಾಟಕ ರಾಜ್ಯ ರೈತ ಸಂಘ ಸೇರಿದಂತೆ ಒಟ್ಟು 10 ಜನರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ಹಾಗೂ ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಮ್ ಅವರಿದ್ದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಹಾಜರಿದ್ದ ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ. ನಾವದಗಿ ಅವರನ್ನು ನ್ಯಾಯಪೀಠವು, 'ಕಲಂ 5ಕ್ಕೆ ನಿಯಮಗಳನ್ನು ರೂಪಿಸಲಾಗಿದೆಯೇ' ಎಂದು ಪ್ರಶ್ನಿಸಿತು.

ಇದಕ್ಕೆ ಉತ್ತರಿಸಿದ ನಾವದಗಿ, 'ಈ ಹಿಂದೆ ಕಲಂ 5ಕ್ಕೆ ನಿಯಮಗಳನ್ನು ರೂಪಿಸುವವರೆಗೆ ಕಾಯ್ದೆ ಜಾರಿ ಮಾಡುವುದಿಲ್ಲ ಎಂದು ಸರ್ಕಾರ ಭರವಸೆ ನೀಡಿತ್ತು. ಸುಗ್ರೀವಾಜ್ಞೆ ಈಗ ಕಾಯ್ದೆಯಾಗಿದ್ದು, ಕಲಂ 5ಕ್ಕೆ ಪೂರಕ ನಿಯಮಗಳನ್ನು ರೂಪಿಸಲಾಗಿದೆ. ಅವುಗಳನ್ನು ನ್ಯಾಯಾಲಯಕ್ಕೆ ಈಗಾಗಲೇ ಸಲ್ಲಿಸಲಾಗಿದ್ದು, ಕಾಯ್ದೆ ಜಾರಿಗೆ ಸಮ್ಮತಿ ನೀಡಬೇಕು' ಎಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಕಲಂ 5ಕ್ಕೆ ರೂಪಿಸಲಾಗಿರುವ ನಿಯಮಗಳ ಕುರಿತು ಆಕ್ಷೇಪಣೆ ಏನಾದರೂ ಇದ್ದಲ್ಲಿ ಮೂರು ವಾರಗಳ ಒಳಗಾಗಿ ಸಲ್ಲಿಸಿ' ಎಂದು ಅರ್ಜಿದಾರರ ಪರ ಹಿರಿಯ ವಕೀಲ ಪ್ರೊ.ರವಿವರ್ಮ ಕುಮಾರ್ ಅವರಿಗೆ ಸೂಚಿಸಿ, ವಿಚಾರಣೆ ಮುಂದೂಡಿದೆ.

ಕಲಂ 5ರಲ್ಲಿ ಏನಿದೆ ?:

ಯಾವುದೇ ಒಬ್ಬ ವ್ಯಕ್ತಿ ಯಾವುದೇ ಜಾನುವಾರನ್ನು ರಾಜ್ಯದೊಳಗಿನ ಒಂದು ಸ್ಥಳದಿಂದ ರಾಜ್ಯಗೊಳಗಿನ ಮತ್ತೊಂದು ಸ್ಥಳಕ್ಕೆ ಹತ್ಯೆ ಮಾಡುವ ಉದ್ದೇಶದಿಂದ ಸಾಗಾಣಿಕೆ ಮಾಡತಕ್ಕದ್ದಲ್ಲ ಅಥವಾ ಸಾಗಾಣಿಕೆಗೆ ಕೊಡತಕ್ಕದ್ದಲ್ಲ ಅಥವಾ ಯಾವುದೇ ರೀತಿಯಲ್ಲೂ ಸಾಗಿಸುವಂತೆ ಮಾಡತಕ್ಕದ್ದಲ್ಲ. ಆದರೆ, ಈ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರವು ನಿಯಮಿಸಿದ ವಿಧಾನದಲ್ಲಿ ನಂಬಿಕಸ್ಥ ಕೃಷಿ ಮತ್ತು ಪಶುಸಂಗೋಪನೆಯ ಉದ್ದೇಶಕ್ಕಾಗಿ ಯಾವುದೇ ಜಾನುವಾರು ಸಾಗಾಣಿಕೆಯನ್ನು ಅಪರಾಧವೆಂದು ಅರ್ಥೈಸತಕ್ಕದ್ದಲ್ಲ.

17-12-2021
Pv Pg 11

ಕೃಷಿಯಲ್ಲಿ ವೈವಿಧ್ಯಮಯ ಬೆಳೆ ಅಳವಡಿಕೆ ಅನಿವಾರ್ಯ

ಹಿಂದೆಲ್ಲಾ ಮಳೆಗಾಲ ಸೇರಿದಂತೆ ಋತುವಿಗೆ ಅನುಗುಣವಾಗಿ ಮಳೆಯಾಗುತ್ತಿದ್ದರಿಂದ ರೈತರು ಆಯಾ ದಿನಮಾನಗಳಿಗೆ ಅನುಗುಣವಾಗಿ ಬೆಳೆಗಳನ್ನು ಬೆಳೆಯುತ್ತಿದ್ದರು. ಆದರೆ ಇತ್ತೀಚಿನ ಕೆಲ ವರ್ಷಗಳಲ್ಲಿ ಮಳೆಗಾಲ ಸೇರಿದಂತೆ ಯಾವುದೇ ಋತುಗನುಗುಣವಾಗಿ ಮಳೆ ಆಗದಿರುವುದರಿಂದ ಬಿತ್ತನೆ ಮಾಡಿದ ರೈತರು ನಷ್ಟಕ್ಕೊಳಗಾಗುವ ನಿದರ್ಶನಗಳು ಒಂದೆಡೆಯಾದರೆ, ಬಿತ್ತನೆ ಮಾಡಬೇಕೋ ಬೇಡವೋ ಎಂಬ ತ್ರಿಶಂಕು ಸ್ಥಿತಿಯಲ್ಲಿ ಇನ್ನು ಕೆಲವು ರೈತರ ಸ್ಥಿತಿಯಾಗಿದೆ.

ಈಗಲೂ ಋತುಗನುಗುಣವಾಗಿ ಮಳೆ ಬರುತ್ತೆ ಎನ್ನುವುದು ಸಾಧ್ಯವಿಲ್ಲ ಋತುಮಾನ ಬದಲಿಸುವುದು ಸಾಧ್ಯವಿಲ್ಲ ಇಡೀ ಜಗತ್ತೇ ಮಾಲಿನ್ಯದಿಂದ ಬಳಲುತ್ತಿದ್ದು ಹವಾಮಾನ ಬದಲಾವಣೆಗೆ ನಾವೇ ಹೊಂದಿಕೊಳ್ಳುವುದು ಅನಿವಾರ್ಯವಾಗಿದ್ದು ಕೃಷಿಯಲ್ಲಿ ಪರಿವರ್ತನೆಗೆ ಮುಂದಾಗಬೇಕಿದೆ.

ರೈತರು ಕೃಷಿಯಲ್ಲಿ ಬೆಳೆಗಳನ್ನು ಬೆಳೆಯುವ ವಿಧಾನ, ಕಾಲಕ್ಕೆ ತಕ್ಕಂತೆ ಆದ್ಯತೆಗೆ ಅನುಗುಣವಾಗಿ ಬದಲಾವಣೆ ಮಾಡಿಕೊಳ್ಳುವುದು ಅನಿವಾರ್ಯ. ರೈತರು ಒಂದೇ ಬೆಳೆಗೆ ಹೊಂದಿಕೊಳ್ಳುವುದರಿಂದ ಲಾಭಕ್ಕಿಂತ ನಷ್ಟವೇ ಹೆಚ್ಚು ಸದ್ಯ ಕಲಬುರಗಿಯಲ್ಲಿ ತೊಗರಿ ಬೆಳೆದಿದ್ದು ಹೊಲದಲ್ಲಿ ನೀರು ನಿಂತು ತೊಗರಿ ಹಳದಿ ಆಗಿದೆ. ಹತ್ತಿ ಬೆಳೆಗೆ ಜಾಸ್ತಿ ಮಳೆಯಾದರೆ ಕೆಳಗಿನ ಕಾಯಿ ಕೊಳೆಯಲು ಶುರುವಾಗುತ್ತದೆ. ಇದರಿಂದ ಕೊಳೆರೋಗ, ಫಂಗಸ್ ರೋಗಗಳು ಹರಡುತ್ತವೆ. ಇವುಗಳನ್ನು ತಡೆಗಟ್ಟಲು ವೈಜ್ಞಾನಿಕ ಪರಿಹಾರಗಳಿವೆ. ಜತೆಗೆ ಯೋಜನೆಗಳನ್ನು ಬದಲಿಸಿಕೊಳ್ಳಬೇಕು.

ಋತುಮಾನದನ್ವಯ ಮಳೆ ಆಗುವುದೇ ವಿರಳ ಆಗಿರುವಂತಹ ಸನ್ನಿವೇಶದಲ್ಲಿ ರೈತರು ಬಹು ವೈವಿಧ್ಯದ ಬೆಳೆಗಳನ್ನು ಹಾಕುವುದರಿಂದ ಒಂದೆರೆಡು ನಾಶವಾದರೂ ಇನ್ನುಳಿದವು ಕೈಹಿಡಿಯಲಿರುವುದರಿಂದ ಬಹು ವೈವಿಧ್ಯದ ಬೆಳೆ ಪದ್ಧತಿ ಅನುಸರಿಸುವುದು ಪ್ರಸ್ತುತ ದಿನಗಳಲ್ಲಿ ಅವಶ್ಯ ಎನಿಸಿದೆ.

ಜಮೀನುಗಳಲ್ಲಿ ನೀರು ಅವಲಂಬಿಸದಿರುವ ಹುಣಸೆ, ಹಲಸು, ಗೋಡಂಬಿ, ಮಾವು, ಸಾಗುವಾನಿ ಮರ ಇತ್ಯಾದಿಗಳನ್ನು ಹಚ್ಚುವುದರಿಂದ ರೈತರಿಗೆ ಎಂತಹ ಸಂದರ್ಭದಲ್ಲೂ ಫಿಕ್ಸೆಡ್ ಡಿಪಾಸಿಟ್ ಇದ್ದಂತೆ. ಪ್ರಕೃತಿ ವಿಕೋಪದ ಹಾನಿಯಿಂದ ತಪ್ಪಿಸಿಕೊಳ್ಳಬೇಕಾದರೆ ಒಕ್ಕಲುತನದಲ್ಲಿ ವೈವಿಧ್ಯತೆಯನ್ನು ಆಳವಡಿಸಿಕೊಳ್ಳುವುದು ಅನಿವಾರ್ಯ.

ಜಮೀನಿನಲ್ಲಿ ಭತ್ತ ಬೆಳೆದರೂ ಜಮೀನಿನ ಸುತ್ತಮುತ್ತ ಗಿಡಗಳನ್ನು ಹಚ್ಚುವುದರಿಂದ ಹಲವು ವರ್ಷಗಳ ಬಳಿಕ ಲಕ್ಷಾಂತರ ರೂ. ಆದಾಯ ಗಳಿಸಬಹುದು. ಉದಾ. ತೊಗರಿ ಬೆಳೆಯಲ್ಲಿ ಸೋಯಾಬಿನ್ ಹಾಕಬಹುದು. ಮಳೆ ಬಂದರೂ ಕಾಯಿ ಸಿಡಿಯದಿರುವುದರಿಂದ ಅಲ್ಲಿಯೂ ಲಾಭದ ನಿರೀಕ್ಷೆ ಹೊಂದಬಹುದು.

ಒಕ್ಕಲುತನದಲ್ಲಿ ವೈವಿಧ್ಯತೆ ಎಂದರೆ ಕೃಷಿ ಜತೆಗೆ ಕೋಳಿ, ಕುರಿ, ಹೈನುಗಾರಿಕೆ, ಜೇನು ಸಾಕಾಣಿಕೆ ಸೇರಿದಂತೆ ಒಕ್ಕಲುತನಕ್ಕೆ ಸಂಬಂಧಿಸಿದ ಬಹು ವಿಧದ ಕೆಲಸ ಕಾರ್ಯಕ್ಕೆ ಮುಂದಾಗುವುದರಿಂದ ನಿರೀಕ್ಷಿತ ಮಟ್ಟದಲ್ಲಿ ಲಾಭ ಗಳಿಸಬಹುದು.

ಕನ್ನೇರಿ ಮಠದಲ್ಲಿ ಪ್ರಾಯೋಗಿಕವಾಗಿ ಪ್ರಯೋಗ ಮಾಡಿದ್ದು



■ ಡಾ.ಎಸ್.ಎ.ಪಾಟೀಲ್, ಧಾರವಾಡ ಕೃಷಿ ವಿವಿ ನಿವೃತ್ತ ಕುಲಪತಿ



ಒಂದು ಎಕರೆಯಲ್ಲಿ ನೂರು ಬೆಳೆ ಹಾಕಿದ್ದೇವೆ. ಸ್ವಲ್ಪ ಜಮೀನು ಇರುವವರು ಈ ಪ್ರಯೋಗ ಮಾಡಿ ವೈವಿಧ್ಯಮಯ ಬೆಳೆ ಹಾಕಬಹುದು. ಸರ್ಕಾರ ಕೃಷಿ ಇಲಾಖೆ ಮೂಲಕ ರೈತರ ಜಮೀನುಗಳಲ್ಲಿ ಹಾಗೂ ಜಮೀನಿನ ತಗ್ಗುಪ್ರದೇಶಗಳಲ್ಲಿ ಲಂಭಾಂತರ ಬಾವಿಗಳನ್ನು ತೆಗೆಸುವ ಕಾರ್ಯಕ್ಕೆ ಮುಂದಾಗಬೇಕು. ಇದರಿಂದ ನೀರು ಬಾವಿಯಲ್ಲಿ ಇಂಗುವುದರಿಂದ ಅಂತರ್ಜಲ ವೃದ್ಧಿಯಾಗುತ್ತದೆ. ಬೋರ್‌ವೆಲ್ ಕೊರೆಸಿದರೂ ಮೂರ್ನಾಲ್ಕು ಇಂಚು ನೀರು ಬೀಳುವುದರಿಂದ ರೈತರು ಪರಿಪೂರ್ಣವಾಗಿ ಕೃಷಿ ಮಾಡಬಹುದು.

ಕೃಷಿ ವಿವಿ ಸಂದರ್ಭಕ್ಕೆ ತಕ್ಕಂತೆ ಸರ್ಕಾರ ಹಾಗೂ ಕೃಷಿ ಇಲಾಖೆಗೆ ಅನೇಕ ಸಂಶೋಧನೆಗಳ ವಾಸ್ತವತೆ, ಸಲಹೆ, ಸೂಚನೆ ನೀಡಿದ್ದು ಹವಾಮಾನ ವೈಪರೀತ್ಯವಾದಾಗ ಯಾವ ರೀತಿ ಬೆಳೆಗಳಲ್ಲಿ ಪರಿವರ್ತನೆ ಮಾಡಿಕೊಳ್ಳಬಹುದು ಎಂಬುದರ ಒಂದು ಪುಸ್ತಕವನ್ನೇ ನೀಡಿದೆ.

ಮಳೆಗಾಲದಲ್ಲಿ ಮಳೆ ಚನ್ನಾಗಿ ಆಗುತ್ತಿದ್ದರೆ ರೈತರು ಸೂಪರ್ ನೇಪಿಯರ್ ಹುಲ್ಲು ಹಚ್ಚಿದರೆ ಎಕರೆಗೆ 70ರಿಂದ 80 ಸಾವಿರ ರೂ. ಗಳಿಸಬಹುದು. ರೈತರು ಒಂದೇ ಬೆಳೆಗೆ ಅಂಟಿಕೊಂಡು ಅದರಲ್ಲೇ ಮುಳುಗಿರುತ್ತಾರೆ. ಕೃಷಿ ಇಲಾಖೆ, ಕೃಷಿ ವಿವಿಗಳಿಗೆ ಭೇಟಿ ನೀಡದಿರುವುದರಿಂದ ಹೊಸ ಹೊಸ ಸಂಶೋಧನೆ, ಯೋಜನೆ, ಸಲಹೆ, ಸೂಚನೆ, ಸಹಾಯಧನ, ಬಿತ್ತನೆ ಬೀಜ, ಬಹು ವೈವಿಧ್ಯತೆಯ ಬೆಳೆಗಳ ಪದ್ಧತಿ ಬಗ್ಗೆ ಅವರಿಗೆ ಮಾಹಿತಿಯೇ ಇರುವುದಿಲ್ಲ.

ಈಗಿನ ಪರಿಸ್ಥಿತಿಯಲ್ಲಿ ಜೋಳ ಬಿತ್ತನೆ ಮಾಡುವುದರಿಂದ ಖರ್ಚುವೆಚ್ಚ ಕೂಲಿ ಆಳುಗಳ ಅಭಾವ ಹಿನ್ನೆಲೆ ಕಲ್ಯಾಣ ಕರ್ನಾಟಕದ ಪ್ರದೇಶಗಳ ರೈತರು ಜೋಳ ಬಿತ್ತನೆ ಕಡಿಮೆ ಮಾಡಿದ್ದಾರೆ. ತೊಗರಿ, ಹತ್ತಿಗೆ ಉತ್ತಮ ಬೆಲೆ ಇರುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಬೆಳೆಯುತ್ತಿರುವುದನ್ನು ಕಾಣಬಹುದು. ಹವಾಮಾನ ವೈಪರೀತ್ಯಕ್ಕೆ ಸಂಬಂಧಿಸಿದಂತೆ ಸರ್ಕಾರ, ಕೃಷಿ ವಿವಿಗಳು ಆಗಾಗ ಸಲಹೆ ಸೂಚನೆ, ಯೋಜನೆಗಳ ಬಗ್ಗೆ ಮಾಹಿತಿ ನೀಡುತ್ತಿರುತ್ತವೆ. ಅದರಂತೆ ಬದಲಾವಣೆ ಮಾಡಿಕೊಳ್ಳುವುದು ಅನಿವಾರ್ಯ.

ರೈತರು ಕೃಷಿಯಲ್ಲಿ ನಷ್ಟದಿಂದ ಹೊರ ಬರಬೇಕಾದರೆ ಜಮೀನುಗಳಲ್ಲಿ ನೀರು ಹರಿದು ಹೋಗುವಂತಿರಬೇಕು. ಚೊಕ್ಕವಾಗಿ ಇಟ್ಟುಕೊಂಡು ಅಭಿವೃದ್ಧಿಪಡಿಸಿಕೊಳ್ಳಬೇಕು. ಹೊಲದ ಫಲವತ್ತತೆ ಹೆಚ್ಚಿಸಿಕೊಳ್ಳಬೇಕು ಎಂದರೆ ದನಗಳನ್ನುಕಟ್ಟುವುದು, ಸಾಕಾಣಿಕೆ ಮಾಡುವುದಲ್ಲ ಸೆಣಬು, ಹಸಿರು ಎಲೆಗಳ ಗೊಬ್ಬರದಿಂದ, ಕಾಲುಗಾಯಿಗಳಿಂದ 2 ವರ್ಷದಲ್ಲಿ ಭೂಮಿಯನ್ನು ಸದೃಢ ಮಾಡಿಕೊಳ್ಳಬಹುದು. ಆಗ ಒಂದು ಬೆಳೆ ಬದಲು ನಾಲ್ಕೈದು ಬೆಳೆ ಬೆಳೆಯಬಹುದು.

ಪ್ರತಿಯೊಬ್ಬ ರೈತರಿಗೂ 10 ಗುಂಟೆಗೆ ಆದರೂ ನೀರು ಲಭ್ಯವಾಗುವಂತಾಗಬೇಕು. ಈ ಸಂಬಂಧ 2015ರಲ್ಲಿ ಶ್ರಮ ವಹಿಸಿ ಜಾರಿಗೆ ತಂದ ಕೃಷಿಭಾಗ್ಯ ಯೋಜನೆ ದೇಶಕ್ಕೆ ಮಾದರಿಯಾಯಿತು. ಕೃಷಿಭಾಗ್ಯ ಎಂದರೆ ಜಮೀನಿನಲ್ಲಿ ಸಣ್ಣದಾಗಿ ಬಾವಿ ನಿರ್ಮಾಣ ಮಾಡಿಕೊಳ್ಳುವ ಯೋಜನೆಯಾಗಿತ್ತು. ಪಾಲಿಹೌಸ್, ಕೃಷಿಹೊಂಡ, ಪಂಪ್‌ಸೆಟ್ ಇತ್ಯಾದಿ ನಿರ್ಮಾಣ ಮಾಡಿಕೊಂಡರೆ ತೋಟಗಾರಿಕೆ ಹಾಗೂ ಒಕ್ಕಲುತನ ಕೃಷಿಗೆ ಪ್ರತ್ಯೇಕವಾಗಿ ಸರ್ಕಾರದಿಂದ ಸಹಾಯಧನ ನೀಡುವುದಾಗಿತ್ತು.



2013-14ರಲ್ಲಿ ನಾನು ಕೃಷಿ ಮಿಷನ್ ಅಧ್ಯಕ್ಷನಾಗಿದ್ದಾಗ ಯೋಜನೆ ರೂಪಿಸಿದ್ದು 2015ರ ಕಾಂಗ್ರೆಸ್ ಸರ್ಕಾರದಲ್ಲಿ ಜಾರಿ ಮಾಡಲಾಗಿತ್ತು. ನಮ್ಮನ್ನು ನೋಡಿ ಮಹಾರಾಷ್ಟ್ರದವರು ಇದನ್ನು ಅಳವಡಿಸಿಕೊಂಡರು. ಈಗ ಅದನ್ನು ಕೈಬಿಡಲಾಗಿದೆ.

ಧಾರವಾಡ ಕೃಷಿ ವಿವಿ ಮಾಜಿ ಕುಲಪತಿಯಾಗಿ ಸೇವೆ, 2009ರಿಂದ 14 ರವರೆಗೆ ಕರ್ನಾಟಕ ಕೃಷಿ ಮಿಷನ್ ಛೇರ್ಮನ್ ಆಗಿದ್ದ ವೇಳೆ, ದೆಹಲಿಯಲ್ಲಿರುವ ದೇಶದ ಏಕೈಕ ಇಂಡಿಯನ್ ಅಗ್ರಿಕಲ್ಚರ್ ರೀಸರ್ಚ್ ಇನ್‌ಸ್ಟಿಟ್ಯೂಟ್‌ನ ನಿರ್ದೇಶಕನಾಗಿ ಕಾರ್ಯನಿರ್ವಹಣೆಯ ಹಲವಾರು ಸಂಶೋಧನೆ, ರೈತರಿಗೆ ಅನುಕೂಲವಾಗಲು ಹಲವಾರು ಯೋಜನೆಗಳನ್ನು ಜಾರಿ, ನಿರ್ಧಾರಗಳನ್ನು ತೆಗೆದುಕೊಂಡಿದ್ದೇನೆ. ಸದ್ಯ ರೈತರು ಎದುರಿಸುವ ಸಮಸ್ಯೆ, ತೊಂದರೆ ಹೇಗೆ ನಿವಾರಿಸಬಹುದು ಎನ್ನುವ ಉದ್ದೇಶಕ್ಕಾಗಿ 50, 60 ಎಕರೆ ಪ್ರದೇಶದಲ್ಲಿ ಪ್ರಯೋಗ ಮಾಡಲು ರೀಸರ್ಚ್ ಅಂಡ್ ಸೋರ್ಸ್ ಸೆಂಟರ್ ಫಾರ್ ವೆಲ್‌ಫೇರ್ ಆಫ್ ಫಾರ್ಮರ್ ಸಂಸ್ಥೆ ಪ್ರಾರಂಭದ ಹಂತದಲ್ಲಿದ್ದು ಈ ಸಂಸ್ಥೆಗೆ ನಾನು ಸಲಹೆಗಾರನಾಗಿದ್ದೇನೆ. ವಿವಿಧೆಡೆ, ಪ್ರಾಯೋಗಿಕವಾಗಿ ಹಾಗೂ ಜಾಗೃತಿ ಮೂಡಿಸುತ್ತಿದ್ದೇವೆ. ನಾವು ಮಾಡಿರುವ ಪ್ರಯೋಗದಲ್ಲಿ ರೈತರು ಸಣ್ಣ ಪ್ರಮಾಣದಲ್ಲಿ ಪ್ರಯೋಗ ಮಾಡಿದರೂ ಲಾಭ ಗಳಿಸಬಹುದು.

ನೈಸರ್ಗಿಕ ಕೃಷಿ ವಿಧಾನ ಬಳಕೆಗೆ ಪ್ರಧಾನಿ ಕರೆ

ನವದೆಹಲಿ: ಲ್ಯಾಬೊರೇಟರಿ ಪ್ರಯೋಗಗಳಿಗಿಂತ ಪ್ರಾಕೃತಿಕ ಕೃಷಿ ವಿಧಾನಗಳ ಕಡೆಗೆ ಹೆಚ್ಚು ಗಮನ ಹರಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ರೈತರಿಗೆ ಕರೆ ನೀಡಿದ್ದಾರೆ. ಸಹಜ ಮತ್ತು ಜೀರೋ-ಬಜೆಟ್ ಕೃಷಿಯ ಬಗ್ಗೆ ಗುಜರಾತಿನಲ್ಲಿ ಆಯೋಜಿಸಲಾಗಿದ್ದ ಸಮ್ಮೇಳನವನ್ನು ಉದ್ದೇಶಿಸಿ ವಿಡಿಯೋ ಕಾನ್ಫರೆನ್ಸ್ ಮೂಲಕ ಮಾತನಾಡಿದ ಅವರು, ಕಳೆದ 7 ವರ್ಷಗಳಲ್ಲಿ ತಂತ್ರಜ್ಞಾನದ ಬಳಕೆಯೊಂದಿಗೆ ಬೀಜದಿಂದ ಹಿಡಿದು ಮಾರುಕಟ್ಟೆವರೆಗೆ ಭಾರತೀಯ ಕೃಷಿ ಕ್ಷೇತ್ರವನ್ನು ಆಧುನೀಕರಿಸಲು ಮತ್ತು ಸಾವಯವ ಕೃಷಿ ಮಾರ್ಗಗಳ ಮೂಲಕ ಪ್ರಕೃತಿಮಾತೆಯನ್ನು ಪುನರುಜ್ಜೀವನಗೊಳಿಸಲು ಹಲವು ಸುಧಾರಣೆಗಳನ್ನು ಜಾರಿಗೊಳಿಸಿದ್ದೇವೆ. ಕೆಮಿಸ್ಟ್ರಿ ಲ್ಯಾಬ್ ಪ್ರಯೋಗಗಳ ಆಧಾರದ ಮೇಲೆ ಕೃಷಿ ಮಾಡುವುದಕ್ಕಿಂತ ಪ್ರಕೃತಿಯ ಲ್ಯಾಬೊರೇಟರಿಯಲ್ಲಿ ಸೃಜಿಸುವ ವೈಜ್ಞಾನಿಕವಾದ ಸಹಜ ಕೃಷಿ ವಿಧಾನಗಳೆಡೆಗೆ ನಮ್ಮ ಗಮನವನ್ನು ಕೇಂದ್ರೀಕರಿಸಬೇಕು ಎಂದು ಮೋದಿ ಹೇಳಿದರು.



ಭೂ-ಆಡಿಟ್ ಪ್ರಯೋಗಾಲಯ: ಸಾವಯವ ಬೆಳೆಗಳಿಗೆ ಉತ್ತಮ ಬೆಲೆ ಲಭಿಸಲು ಸಾಧ್ಯವಾಗುವಂತೆ ಭೂಮಿಯ ಆಡಿಟ್ ಮಾಡಿ, ಸಾವಯವ ಉತ್ಪನ್ನಗಳನ್ನು ಪ್ರಮಾಣೀಕರಿಸುವ ಪ್ರಯೋಗಾಲಯಗಳನ್ನು ಸ್ಥಾಪಿಸಲು ಕೇಂದ್ರ ಸರ್ಕಾರ ಪ್ರಯತ್ನಿಸುತ್ತಿದೆ ಎಂದು ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮಿತ್ ಷಾ ಹೇಳಿದ್ದಾರೆ. ಆಗ್ರೋ ಮತ್ತು ಫುಡ್ ಪ್ರೊಸೆಸಿಂಗ್ ಬಗೆಗಿನ ರಾಷ್ಟ್ರೀಯ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದ ಅವರು, ಇಂಥ ಪ್ರಯೋಗಾಲಯಗಳ ಸ್ಥಾಪನೆಯಿಂದ ರೈತರ ಬೆಳೆಗೆ ಹೆಚ್ಚಿನ ಬೆಲೆ ಸಿಗುತ್ತದೆ ಮತ್ತು ಸಾವಯವ ಕೃಷಿಗೆ ಉತ್ತೇಜನ ಲಭಿಸುತ್ತದೆ ಎಂದರು. ಸಾವಯವ ಕೃಷಿಯು ಇಂದಿನ ಅಗತ್ಯವಾಗಿದೆ. ಸಗಣಿಯಿಂದ ಮಾಡಿದ ಗೊಬ್ಬರವನ್ನು ಬಳಸಿ ಮಾಡುವ ಸಾವಯವ ಕೃಷಿ ಕೈಗೊಂಡು ಭೂಮಿಯ ಫಲವತ್ತತೆಯನ್ನು ಸುಧಾರಿಸಬೇಕೆಂಬುದು ಪ್ರಧಾನಿ ಮೋದಿ ಅಭಿಪ್ರಾಯವಾಗಿದೆ ಎಂದರು.

17-12-2021 Uv Pg 06

17-12-2021 Vv Pg 09